ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಳಿಭಾಗ್ಯದ ಫಲಾನುಭವಿಗಳು	ವಿಧವಾ ವೇತನದ ಫಲಾನುಭವಿಗಳು	ವೃದ್ಧಾಪ್ಯ ವೇತನ ಪಡೆಯುತ್ತಿರುವ ಮಹಿಳಾ ಫಲಾನುಭವಿಗಳು
೧	೨	೩	೪	೫
೧	ಬೆಂಗಳೂರು (ನಗರ)	೧೦೭	೯೮೬೯	...
೨	ಬೆಂಗಳೂರು (ಗ್ರಾಮಾಂತರ)	೭೧	೨೪೭೦೪	...
೩	ಮಂಡ್ಯ	೧೦	೮೨೮೬೬	೨೧೬೨೯
೪	ಮೈಸೂರು	೮೩	೪೦೫೯೯	೨೭೬೦೧
೫	ಮಡಕೇರಿ	೩೧	೬೯೯೩	೩೨೬೧
೬	ಮಂಗಳೂರು (ದ.ಕ.)	...	೨೭೮೦೨	೧೧೭೪೨
೭	ಕಾರವಾರ (ಉ.ಕ.)	...	೧೦೨೮೯	...
೮	ಚಿಕ್ಕಮಗಳೂರು	೧೧೪	೭೨೫೩	...
೯	ತುಮಕೂರು	೭೨	೧೮೫೮೪	...
೧೦	ಕೋಲಾರ	೩೦೬	೧೮೨೫೦	೧೭೦೮೪
೧೧	ಚಿತ್ರದುರ್ಗ	೧೦೩	೧೭೮೮೩	೯೪೩೦
೧೨	ಬಿಜಾಪುರ	...	೯೭೮೦	...
೧೩	ಶಿವಮೊಗ್ಗ	೧೬೪	೧೦೭೬೭	...
೧೪	ಬಳ್ಳಾರಿ	೪೩	೧೦೨೮೪	೧೯೪
೧೫	ಬೆಳಗಾಂ	೭೪	೧೮೬೦೪	೨೬೮೪೦
೧೬	ಧಾರವಾಡ	೮೧೧	೨೯೮೯	೬೧೭೨
೧೭	ಗುಲ್ಬರ್ಗಾ	..	೨೧೨೦೬	...
೧೮	ರಾಯಚೂರು	೩೯	೧೯೦೭೭	೫೨೦
೧೯	ಬೀದರ್	೧೦	೭೨೯೯	...
೨೦	ಹಾಸನ	...	೧೮೩೧೩	೨೬
	ಒಟ್ಟು	೨೦೩೮	೩೫೮೭೮೧೦	೧೨೪೪೯೯

ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮ

೩೮೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಸಹಕಾರ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ರಾಜ್ಯದಲ್ಲಿ ಬಹುರಾಜ್ಯ ಸಹಕಾರಿ ಸಂಘಗಳ ಅಧಿನಿಯಮ ಜಾರಿಗೆ ಬಂದಿದೆಯೇ ?ಹಾಗಿದ್ದಲ್ಲಿ ಯಾವಾಗಿನಿಂದ ?

ಆ) ಈ ಅಧಿನಿಯಮದ ಅನುಸಾರ ಎಷ್ಟು ಸಹಕಾರಿ ಸಂಘಗಳು ನೊಂದಾಯಿತವಾಗಿದೆ ? ಇವುಗಳಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ಸಂಸ್ಥೆಗಳೆಷ್ಟು ? ಹಾಗೂ ಬೇರೆ ರಾಜ್ಯಗಳಲ್ಲಿ ಸ್ಥಾಪಿತವಾಗಿ ಶಾಖೆಗಳನ್ನು ಹೊಂದಿರುವ ಸಂಸ್ಥೆಗಳೆಷ್ಟು ?

ಇ) ಸರ್ಕಾರ ಈ ಅಧಿನಿಯಮಕ್ಕೆ ನಿಯಮಾವಳಿ ರಚಿಸಿದೆಯೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು),—

ಅ) ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮವು ೧೯೮೪ ಇದು ೧೬-೯-೧೯೮೫ ರಿಂದ ರಾಜ್ಯದಲ್ಲಿ ಜಾರಿಗೆ ಬಂದಿರುತ್ತದೆ.

ಆ) ಸದರಿ ಅಧಿನಿಯಮದ ಅನುಸಾರ ರಾಜ್ಯದಲ್ಲಿ ಒಂದು ಸಹಕಾರ ಸಂಘವು ನೊಂದಾಯಿಸಲ್ಪಟ್ಟಿರುತ್ತದೆ ಅದೂ ಅಲ್ಲದೆ ಒಂದು ಸಹಕಾರಿ ಸಕ್ಕರೆಕಾರ್ಖಾನೆಯು ರಾಜ್ಯಗಳ ಪುನರ್ ವಿಂಗಡನೆಯ ನಂತರ ಬಹು ಘಟಕಗಳ ಸಹಕಾರ ಸಂಘಗಳ ಅಧಿನಿಯಮಗಳ ಪ್ರಕಾರ ನೊಂದಾಯಿಸಲಾಗಿತ್ತೆಂದು ಪರಿಗಣಿತವಾಗಿರುತ್ತದೆ. ಇನ್ನೊಂದು ಸಹಕಾರಿ ಬ್ಯಾಂಕು ಮಹಾರಾಷ್ಟ್ರ ರಾಜ್ಯದಲ್ಲಿ ನೊಂದಾಯಿಸಲ್ಪಟ್ಟಿದ್ದು ಅದರ ಒಂದು ಶಾಖೆಯು ಕರ್ನಾಟಕ ರಾಜ್ಯದಲ್ಲಿರುತ್ತದೆ.

ಇ) ಸದರಿ ಬಹು ರಾಜ್ಯಗಳ ಅಧಿನಿಯಮವು ಕೇಂದ್ರ ಶಾಸನವಿದ್ದು ಅದಕ್ಕೆ ನಿಯಮಾವಳಿಗಳನ್ನು ಕೇಂದ್ರ ಸರ್ಕಾರವೇ ರಚಿಸಿರುತ್ತದೆ.

ಮುಜರಾಯಿ ಮತ್ತು ವಕ್ಫ್ ಸಂಸ್ಥೆಗಳ ಕಟ್ಟಡಗಳು

೩೩೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ),—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭ನೇ ಏಪ್ರಿಲ್‌ನಿಂದ ಡಿಸೆಂಬರ್‌ರವರೆಗೆ ಮುಜರಾಯಿ ಕಟ್ಟಡಗಳ ಸಲುವಾಗಿ ಮಂಜೂರ್ಮಾಡಿದ ಹಾಗೂ ಬಿಡುಗಡೆ ಮಾಡಿದ ಹಣವೆಷ್ಟು ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು),

ಆ) ಸದರಿ ಅವಧಿಯಲ್ಲಿ ವಕ್ಫ್ ಬೋರ್ಡ್ ಸಂಸ್ಥೆಗಳ ಕಟ್ಟಡಗಳ ಸಲುವಾಗಿ ಮಂಜೂರ್ಮಾಡಿದ ಹಾಗೂ ಬಿಡುಗಡೆಮಾಡಿದ ಹಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್) ಮಂತ್ರಿಗಳು).—

ಅ) ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಸಚಿವರಿಗೆ ಸಂಬಂಧಿಸಿದ್ದಲ್ಲ.

ಆ) ವಕ್ಫ್ ಸಂಸ್ಥೆಗಳ ಕಟ್ಟಡಗಳ ಸಲುವಾಗಿ ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾವಾರು ಮಾಹಿತಿಯು ಈ ಕೆಳಕಂಡಂತಿದೆ.

	ರೂ. ಲಕ್ಷಗಳಲ್ಲಿ
ಶಿವಮೊಗ್ಗ	೨-೦೦
ತುಮಕೂರು	೧-೦೦
ಮೈಸೂರು	೫-೦೦
ಗುಲ್ಬರ್ಗಾ	೩-೦೦
ಬೆಂಗಳೂರು	೫-೦೦
ಚಿತ್ರದುರ್ಗ	೧-೦೦
ಮಂಡ್ಯ	೨-೦೦
ಒಟ್ಟು ರೂ.	೧೯-೦೦ ಲಕ್ಷಗಳು